ಅನುಬಂಧ-2

ಕರ್ನಾಟಕ ನ್ಯಾಯವಾದಿಗಳ ಕಲ್ಯಾಣನಿಧಿ (ತಿದ್ದುಪಡಿ) ವಿಧೇಯಕ, 2004

(2004ರ ವಿಧಾನಸಭಾ ವಿಧೇಯಕ ಸಂಖ್ಯೆ 24)

ಕರ್ನಾಟಕ ನ್ಯಾಯವಾದಿಗಳ ಕಲ್ಯಾಣನಿಧಿ ಅಧಿನಿಯಮ, 1983ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ. ಇದರಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ನ್ಯಾಯವಾದಿಗಳ ಕಲ್ಯಾಣನಿಧಿ ಅಧಿನಿಯಮ, 1983ನ್ನು (1985ರ ಕರ್ನಾಟಕ ಅಧಿನಿಯಮ ಸಂಖ್ಯೆ 2) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ:

ಇದು ಭಾರತ ಗಣರಾಜ್ಯದ ಐವತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ:- (1) ಈ ಅಧಿನಿಯಮವನ್ನು ಕರ್ನಾಟಕ ನ್ಯಾಯವಾದಿಗಳ ಕಲ್ಯಾಣನಿಧಿ (ತಿದ್ದುಪಡಿ) ಅಧಿನಿಯಮ, 2004 ಎಂದು ಕರೆಯತಕ್ಕದ್ದು.

(2) ಇದು, ರಾಜ್ಯಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ಈ ಅಧಿನಿಯಮದ ಬೇರೆಬೇರೆ ಉಪಬಂಧಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

2. 2ನೇ ಪ್ರಕರಣದ ತಿದ್ದುಪಡಿ:- ಕರ್ನಾಟಕ ನ್ಯಾಯವಾದಿಗಳ ಕಲ್ಯಾಣನಿಧಿ ಅಧಿನಿಯಮ, 1983ರ (1985ರ ಕರ್ನಾಟಕ ಅಧಿನಿಯಮ 2) (ಇದರಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ), 2ನೇ ಪ್ರಕರಣದಲ್ಲಿ,-

(1) (ಎಫ್) ಖಂಡದ ತರುವಾಯ ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:-

"(ಎಫ್ಎಫ್) ವಾದಕಾಲೀನ ಅರ್ಜಿ ಎಂಬುದು, ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಪ್ರಾಧಿಕಾರದ ಮುಂದೆ ಯಾವುದೇ ಇತ್ಯರ್ಥದಲ್ಲಿರುವ ಅಥವಾ ವಿಲೆಯಾದ ಮೊಕದ್ದಮೆಗೆ ಅಥವಾ ವ್ಯವಹರಣೆಗೆ ಸಂಬಂಧಪಟ್ಟಂತೆ ದಾಖಲಿಸಲಾದ ಎಲ್ಲಾ ಅರ್ಜಿಗಳನ್ನು ಒಳಗೊಳ್ಳುತ್ತದೆ."

(2) (ಎಂ) ಖಂಡದಲ್ಲಿ 16ನೇ ಪ್ರಕರಣದ (4)ನೇ ಉಪಪ್ರಕರಣ" ಎಂಬ ಪದಗಳು, ಅಂಕಿಗಳು ಮತ್ತು ಆವರಣಗಳಿಗೆ, "15ನೇ ಪ್ರಕರಣದ (4)ನೇ ಉಪಪ್ರಕರಣ ಅಥವಾ 23ಎ ಪ್ರಕರಣದ (3)ನೇ ಉಪಪ್ರಕರಣ" ಎಂಬ ಪದಗಳು, ಅಂಕಿಗಳು ಮತ್ತು ಆವರಣಗಳನ್ನು ಪ್ರತಿಯೋಜಿಸತಕ್ಕದ್ದು.

3. 15ನೇ ಪ್ರಕರಣದ ತಿದ್ದುಪಡಿ.-ಮೂಲ ಅಧಿನಿಯಮದ 15ನೇ ಪ್ರಕರಣದಲ್ಲಿ,-

(1) (1)ನೇ ಉಪ-ಪ್ರಕರಣಕ್ಕೆ, ಪರಂತುಕಗಳನ್ನು ಹೊರತುಪಡಿಸಿ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(1) ಕರ್ನಾಟಕ ರಾಜ್ಯದಲ್ಲಿ ವೃತ್ತಿ ನಡೆಸುತ್ತಿರುವ ಮತ್ತು ಕರ್ನಾಟಕ ರಾಜ್ಯ ಬಾರ್ ಕೌನ್ಸಿಲ್‌ನ ಪಟ್ಟಿಯಲ್ಲಿ ಹೆಸರನ್ನು ಹೊಂದಿರುವ ಪ್ರತಿಯೊಬ್ಬ ನ್ಯಾಯವಾದಿಯು ನಿಧಿಯ ಸದಸ್ಯನಾಗತಕ್ಕದ್ದು ಮತ್ತು ನಿಯಮಿಸಬಹುದಾದಂಥ ನಮೂನೆಯಲ್ಲಿ, ಕೆಳಕಂಡ ಪ್ರವೇಶ ಶುಲ್ಕದೊಡನೆ ಘೋಷಣೆಯನ್ನು ಸಲ್ಲಿಸತಕ್ಕದ್ದು, ಎಂದರೆ.-

(i) ಕರ್ನಾಟಕ ನ್ಯಾಯವಾದಿಗಳ ಕಲ್ಯಾಣನಿಧಿ (ತಿದ್ದುಪಡಿ) ಅಧಿನಿಯಮ, 2004ರ (ಇದರಲ್ಲಿ ಇನ್ನು ಮುಂದೆ ತಿದ್ದುಪಡಿ ಅಧಿನಿಯಮ, 2004 ಎಂದು ಉಲ್ಲೇಖಿಸಲಾಗಿದೆ) ಪ್ರಾರಂಭದಂದು ಅಥವಾ ತರುವಾಯ ಹಾಗೆ ಪಟ್ಟಿಯಲ್ಲಿ ಹೆಸರನ್ನು ಸೇರಿಸಿದ ಒಬ್ಬ ನ್ಯಾಯವಾದಿಯ ಸಂಬಂಧದಲ್ಲಿ ರಾಜ್ಯ ಬಾರ್ ಕೌನ್ಸಿಲ್‌ನ ಪಟ್ಟಿಯಲ್ಲಿ ಆತನ ಹೆಸರನ್ನು ಸೇರಿಸಿದ ದಿನಾಂಕದಿಂದ ಒಂದು ತಿಂಗಳೊಳಗೆ ಎರಡು ಸಾವಿರ ರೂಪಾಯಿತಳನ್ನು;

(ii) 1997ರ ಏಪ್ರಿಲ್ ಎರಡನೇ ದಿನಾಂಕದ ತರುವಾಯ ಆದರೆ, ಅಂಥ ಪ್ರಾರಂಭಗೊಳ್ಳುವುದಕ್ಕೆ ಮೊದಲು ಪಟ್ಟಿಯಲ್ಲಿ ಹೆಸರುಗಳನ್ನು ಸೇರಿಸಿದ ನ್ಯಾಯವಾದಿಗಳ ಸಂದರ್ಭದಲ್ಲಿ, ತಿದ್ದುಪಡಿ ಅಧಿನಿಯಮ, 2004ರ ಪ್ರಾರಂಭದ ದಿನಾಂಕದಿಂದ ಒಂದು ತಿಂಗಳೊಳಗೆ ಒಂದು ಸಾವಿರ ರೂಪಾಯಿಗಳನ್ನು;

–ಸಂದಾಯ ಮಾಡತಕ್ಕದ್ದು."

(2) (1ಎ) ಉಪ–ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(1ಎ) 15ನೇ ಪ್ರಕರಣದ (1)ನೇ ಉಪ–ಪ್ರಕರಣದ ಎರಡನೇ ಪರಂತುಕದಲ್ಲಿ ಉಲ್ಲೇಖಿಸಲಾದ ಪ್ರವೇಶ ಶುಲ್ಕದ ಬಾಕಿ ಸಂದಾಯ ಮಾಡಲು ವಿಫಲನಾದಲ್ಲಿ ಅಥವಾ (1)ನೇ ಉಪ–ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಸಮಯದೊಳಗೆ ಪ್ರವೇಶ ಶುಲ್ಕ ಸಂದಾಯ ಮಾಡಲು ವಿಫಲನಾದಲ್ಲಿ, 1997ರ ಏಪ್ರಿಲ್ ಎರಡನೇ ದಿನಾಂಕದಿಂದ ಅಥವಾ ಸಂದರ್ಭಾನುಸಾರ, ತಿದ್ದುಪಡಿ ಅಧಿನಿಯಮ, 2004ರ ಪ್ರಾರಂಭದ ದಿನಾಂಕದಿಂದ ಒಂದು ತಿಂಗಳೂ ಮುಕ್ತಾಯವಾದ ನಿಕಟ ತರುವಾಯ ಅಂಥ ಬಾಕಿ ಪ್ರವೇಶ ಶುಲ್ಕವನ್ನು ಅಥವಾ ಪ್ರವೇಶ ಶುಲ್ಕವನ್ನು ತಿಂಗಳಿಗೆ ಅಥವಾ ಭಾಗಕ್ಕೆ ಐವತ್ತು ರೂಪಾಯಿಗಳ ವಿಳಂಬ ಶುಲ್ಕದೊಂದಿಗೆ ಸಂದಾಯ ಮಾಡಬಹುದು."

(3) (3)ನೇ ಉಪ–ಪ್ರಕರಣದ ತರುವಾಯ, ಈ ಮುಂದಿನ ಉಪ–ಪ್ರಕರಣಗಳನ್ನು ಸೇರಿಸತಕ್ಕದ್ದು, ಎಂದರೆ:–

"(4) ಪ್ರತಿಯೊಬ್ಬ ಸದಸ್ಯರು, ತಾನು ನಿಧಿಯ ಸದಸ್ಯನಾದ ದಿನಾಂಕದಿಂದ ಪ್ರತಿ ಐದು ವರ್ಷಗಳು ಮುಕ್ತಾಯಗೊಂಡ ನಂತರದ ಮುಂದಿನ ಒಂದು ತಿಂಗಳೊಳಗೆ ಐದು ನೂರು ರೂಪಾಯಿಗಳ ಶುಲ್ಕದೊಂದಿಗೆ ಒಂದು ಘೋಷಣೆಯನ್ನು ದಾಖಲಿಸತಕ್ಕದ್ದು, ಇದಕ್ಕೆ ತಪ್ಪಿದಲ್ಲಿ, ಈ ಅಧಿನಿಯಮದ ಉದ್ದೇಶಕ್ಕಾಗಿ ಆತ ತನ್ನ ನ್ಯಾಯವಾದಿ ವೃತ್ತಿಯನ್ನು ಸ್ವಯಿಚ್ಛೆಯಿಂದ ನಿಲ್ಲಿಸಿರುವುದಾಗಿ ಭಾವಿಸತಕ್ಕದ್ದು:

ಪರಂತು, ಆ ಸದಸ್ಯನು, ಮೇಲೆ ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯಗೊಂಡ ಮೂರು ತಿಂಗಳೊಳಗೆ, ತಿಂಗಳಿಗೆ ಐವತ್ತು ರೂಪಾಯಿಗಳ ದಂಡದೊಂದಿಗೆ ಅಂಥ ಘೋಷಣೆಯನ್ನು ದಾಖಲಿಸಬಹುದು ಮತ್ತು ಆತ, ಅಂಥ ದಂಡದೊಂದಿಗೆ ಘೋಷಣೆಯನ್ನು ದಾಖಲಿಸಿದ್ದಲ್ಲಿ ಅದನ್ನು ಆತನು ವೃತ್ತಿ ನಿಲ್ಲಿಸಿರುವುದಾಗಿ ಭಾವಿಸುವಂತೆ ಅರ್ಥೈಸತಕ್ಕದ್ದಲ್ಲ:

ಮತ್ತು ಪರಂತು, ತಿದ್ದುಪಡಿ ಅಧಿನಿಯಮ, 2004ರ ಪ್ರಾರಂಭದ ದಿನಾಂಕದಂದು ಒಬ್ಬ ಸದಸ್ಯನು, ತಾನು ಸದಸ್ಯನಾದ ತರುವಾಯ, ವೃತ್ತಿಯಲ್ಲಿ ಐದು ವರ್ಷಗಳನ್ನು ಪೂರ್ಣಗೊಳಿಸಿದ್ದರೆ, ಆತನು ಅಂಥ ಪ್ರಾರಂಭದ ದಿನಾಂಕದಿಂದ ಆರು ತಿಂಗಳೊಳಗೆ ಅಂಥ ಘೋಷಣೆಯನ್ನು ದಾಖಲಿಸತಕ್ಕದ್ದು.

(5) ಒಬ್ಬ ಸದಸ್ಯನು, (4)ನೇ ಉಪ–ಪ್ರಕರಣದ ಅಡಿಯಲ್ಲಿ ನೀಡಲಾದ ಸಮಯದೊಳಗೆ ಘೋಷಣೆಯನ್ನು ದಾಖಲಿಸಲು ವಿಫಲನಾದಲ್ಲಿ, ಅವನು ಘೋಷಣೆಯನ್ನು ದಾಖಲಿಸಿದ ವರ್ಷವೂ ಒಳಗೊಂಡಂತೆ, ಅಂಥ ಘೋಷಣೆಯನ್ನು ದಾಖಲಿಸುವವರೆಗಿನ ಪ್ರತಿವರ್ಷದ ಅವಧಿಯು, ಈ ಅಧಿನಿಯಮದ ಉದ್ದೇಶಕ್ಕಾಗಿ ವೃತ್ತಿ ನಿಲ್ಲಿಸುವುದಾಗಿ ಭಾವಿಸಲಾದ ಅವಧಿ ಎಂಬಂತೆ ಪರಿಗಣಿಸತಕ್ಕದ್ದು.

(6) (4)ನೇ ಉಪ–ಪ್ರಕರಣದ ಅಡಿಯಲ್ಲಿ ವೃತ್ತಿ ನಿಲ್ಲಿಸಿರುವುದಾಗಿ ಭಾವಿಸಿದ ಪ್ರತಿವರ್ಷಕ್ಕಾಗಿ, ವಾರ್ಷಿಕ ಮೂರು ಸಾವಿರ ರೂಪಾಯಿಗಳ ಮೊಬಲಗನ್ನು 16ನೇ ಪ್ರಕರಣದ (1)ನೇ ಉಪ–ಪ್ರಕರಣದ ಅಡಿಯಲ್ಲಿ ಸಂದಾಯಮಾಡತಕ್ಕ ಮೊಬಲಗಿಂದ ಕಳೆಯತಕ್ಕದ್ದು".

4. 16ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 16ನೇ ಪ್ರಕರಣದಲ್ಲಿ,–

(1) (1)ನೇ ಉಪ–ಪ್ರಕರಣದಲ್ಲಿ,

(ಎ) "ಮೂರು ಸಾವಿರ ರೂಪಾಯಿಗಳ" ಮತ್ತು "ಒಂದು ಲಕ್ಷ ಐವತ್ತು ಸಾವಿರ ರೂಪಾಯಿಗಳ" ಎಂಬ ಪದಗಳಿಗೆ ಕ್ರಮವಾಗಿ "ಎರಡು ಸಾವಿರ ರೂಪಾಯಿಗಳ" ಮತ್ತು ಐವತ್ತು ಸಾವಿರ ರೂಪಾಯಿಗಳ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) ಕೊನೆಯಲ್ಲಿ, ಈ ಮುಂದಿನ ಪರಂತುಕಗಳನ್ನು ಸೇರಿಸತಕ್ಕದ್ದು, ಎಂದರೆ:–

"ಪರಂತು, ಒಬ್ಬ ನ್ಯಾಯವಾದಿಯು, 2000ದ ಆಗಸ್ಟ್ ಒಂದನೇ ದಿನಾಂಕದಂದು ಅಥವಾ ಆ ತರುವಾಯ ಸದಸ್ಯನಾಗಿದ್ದಲ್ಲಿ ಮತ್ತು ಅಂಥ ಪ್ರವೇಶದ ದಿನಾಂಕದಂದು ಅರವತ್ತು ವರ್ಷಗಳ ವಯಸ್ಸಾಗಿದ್ದಲ್ಲಿ, ಮರಣದ ಹೊರಗಾತಿ ಇತರೆ ಯಾವುದೇ ಕಾರಣಕ್ಕೆ ವೃತ್ತಿಯನ್ನು ನಿಲ್ಲಿಸಿದ ಸಂದರ್ಭದಲ್ಲಿ ಸದಸ್ಯನಿಗೆ ಮತ್ತು ಅವನ ಮರಣದಿಂದಾಗಿ ವೃತ್ತಿಯು ನಿಂತು ಹೋದಲ್ಲಿ ಅವನ ನಾಮನಿರ್ದೇಶಿತನಿಗೆ ಅಥವಾ ನಾಮನರ್ದೇಶಿತನು ಇಲ್ಲದಿದ್ದಲ್ಲಿ ಕಾನೂನು ಸಮ್ಮತ ವಾರಸುದಾರರಿಗೆ ಐವತ್ತು ಸಾವಿರ ರೂಪಾಯಿಗಳ ಗರಿಷ್ಠ ಮೊಬಲಗಿಗೆ ಒಳಪಟ್ಟು ವೃತ್ತಿಯ ಪ್ರತಿಯೊಂದು ಪೂರ್ಣಗೊಂಡ ವರ್ಷಕ್ಕಾಗಿ ಮೂರು ಸಾವಿರ ರೂಪಾಯಿಗಳ ದರದಂತೆ ಮೊಬಲಗನ್ನು ಸಂದಾಯ ಮಾಡತಕ್ಕದ್ದು:

ಮತ್ತು ಪರಂತು, ಒಬ್ಬ ನ್ಯಾಯವಾದಿಯು 1997ರ ಏಪ್ರಿಲ್ ಏರಡನೇ ದಿನಾಂಕಕ್ಕೂ ಮೊದಲು ಸದಸ್ಯನಾಗಿದ್ದಲ್ಲಿ, ಅವನು 15ನೇ ಪ್ರಕರಣದ (1)ನೇ ಉಪ–ಪ್ರಕರಣದ ಎರಡನೆ ಪರಂತುಕದ ಅಡಿಯಲ್ಲಿ ಅಗತ್ಯವಿರಬಹುದಾದಂತೆ ಬಾಕಿ ಪ್ರವೇಶ ಶುಲ್ಕವನ್ನು ಸಂದಾಯ ಮಾಡಿರದಿದ್ದಲ್ಲಿ ಮತ್ತು ಅಂಥ ದಿನಾಂಕದ ತರುವಾಯ ನಿಧಿಗೆ ಮರುಪ್ರವೇಶ ಪಡೆಯದಿರದಿದ್ದಲ್ಲಿ ಮರಣದ ಕಾರಣ ಹೊರತಾಗಿ ಇತರೆ ಯಾವುದೇ ಕಾರಣಕ್ಕೆ ವೃತ್ತಿಯನ್ನು ನಿಲ್ಲಿಸಿದ ಸಂದರ್ಭದಲ್ಲಿ ಸದಸ್ಯನಿಗೆ ಮತ್ತು ಅವನ ಮರಣದಿಂದಾಗಿ ವೃತ್ತಿಯು ನಿಂತು ಹೋದಲ್ಲಿ ಅವನ ನಾಮನಿರ್ದೇಶಿತನಿಗೆ ಅಥವಾ ನಾಮನಿರ್ದೇಶಿತನು ಇಲ್ಲದಿದ್ದಲ್ಲಿ ಅವನ ಕಾನೂನು ಸಮ್ಮತ ವಾರಸುದಾರರಿಗೆ ವೃತ್ತಿಯ ಪ್ರತಿಯೊಂದು ಪೂರ್ಣಗೊಂಡ ವರ್ಷಕ್ಕಾಗಿ ಒಂದು ಸಾವಿರ ರೂಪಾಯಿಗಳ ದರದಂತೆ ಮೊಬಲಗನ್ನು ಸಂದಾಯ ಮಾಡತಕ್ಕದ್ದು."

(2) (4)ನೇ ಉಪ–ಪ್ರಕರಣದಲ್ಲಿ, ಮೂರನೆ ಪರಂತುಕವನ್ನು ಬಿಟ್ಟುಬಿಡತಕ್ಕದ್ದು.

(3) (5)ನೇ ಉಪ–ಪ್ರಕರಣದ ಪರಂತುಕಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"ಪರಂತು, ನೌಕರಿ, ಉಪವೃತ್ತಿ ಅಥವಾ ವ್ಯವಹಾರದ ಉದ್ದೇಶಕ್ಕಾಗಿ ಸ್ವಇಚ್ಛೆಯಿಂದ ವೃತ್ತಿ ನಿಲ್ಲಿಸಿದ್ದ ಮತ್ತು ಪುನಃ ವೃತ್ತಿಯಲ್ಲಿ ತೊಡಗಿದ ಅಥವಾ ನಿವೃತ್ತಿಯಿಂದಾಗಿ ಅಥವಾ ಸೇವೆಯಿಂದ ಅಥವಾ ಉದ್ಯೋಗದಿಂದ ತೆಗೆದು ಹಾಕಿದ ಮೇಲೆ ನ್ಯಾಯವಾದಿಯಾಗಿ ಪಟ್ಟಿಗೆ ಸೇರಿಸಲಾದ ಅಥವಾ ನಲವತ್ತು ವರ್ಷಗಳ ವಯಸ್ಸಾದ ತರುವಾಯ ನ್ಯಾಯವಾದಿಯಾಗಿ ಪಟ್ಟಿಗೆ ಸೇರಿದ ಅಥವಾ ನಲವತ್ತು ವರ್ಷಗಳ ವಯಸ್ಸಾದ ತರುವಾಯ ಬೇರೆ ರಾಜ್ಯಗಳಿಂದ ವರ್ಗಾಯಿತನಾಗಿ ಕರ್ನಾಟಕ ರಾಜ್ಯ ಬಾರ್ ಕೌನ್ಸಿಲ್‌ನ ಪಟ್ಟಿಗೆ ಸೇರಿಸಲಾದ ಸದಸ್ಯನಿಗೆ ಇಡುಗಂಟು ಮೊತ್ತವನ್ನು ಸಂದಾಯಮಾಡತಕ್ಕದ್ದಲ್ಲ. ಆದಾಗ್ಯೂ, ಅಂಥ ಸದಸ್ಯನಿಗೆ, ಅವನು ವೃತ್ತಿಯಲ್ಲಿ ಪೂರ್ಣಗೊಳಿಸಿದ ಪ್ರತಿವರ್ಷಕ್ಕಾಗಿ ಎರಡು ಸಾವಿರರೂಪಾಯಿಗಳ ದರದಂತೆ ಮೊಬಲಗನ್ನು ನಿಧಿಯಿಂದ ಸಂದಾಯ ಮಾಡತಕ್ಕದ್ದು:

ಮತ್ತು ಪರಂತು, ಒಬ್ಬ ಸದಸ್ಯನು, ನಿಧಿಯ ಸದಸ್ಯತ್ವಕ್ಕೆ ಪ್ರವೇಶ ಪಡೆದ ದಿನಾಂಕದಿಂದ ಐದು ವರ್ಷಗಳೊಳಗೆ ಸ್ವಯಂ ನಿವೃತ್ತಿಯಿಂದ ಅಥವಾ ಶಾಶ್ವತ ಅಂಗವಿಕಲತೆಯಿಂದ ತನ್ನ ವೃತ್ತಿ ಸಮಾಪ್ತಿಗೊಳಿಸಿದ ಸಂದರ್ಭದಲ್ಲಿ, ಈ ಅಧಿನಿಯಮದ ಅಡಿಯಲ್ಲಿ ಮೊಬಲಗನ್ನು ಕ್ಲೇಮು ಮಾಡಲು ಅರ್ಹನಾಗಿರತಕ್ಕದ್ದಲ್ಲ".

5. **18ನೇ ಪ್ರಕರಣದ ತಿದ್ದುಪಡಿ.**– ಮೂಲ ಅಧಿನಿಯಮದ 18ನೇ ಪ್ರಕರಣದ (ಬ) ಖಂಡವನ್ನು ಬಿಟ್ಟುಬಿಡತಕ್ಕದು.

6. **23ನೇ ಪ್ರಕರಣದ ತಿದ್ದುಪಡಿ.**– ಮೂಲ ಅಧಿನಿಯಮದ 23ನೇ ಪ್ರಕರಣದ (1ಎ) ಉಪ–ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(1ಎ) ಪ್ರತಿಯೊಬ್ಬ ನ್ಯಾಯವಾದಿಯು, ಅವನು ಸಲ್ಲಿಸಿದ ಪ್ರತಿಯೊಂದು ವಾದಕಾಲೀನ ಅರ್ಜಿಯ ಮೇಲೆ ಐದು ರೂಪಾಯಿಗಳ ಮೌಲ್ಯದ ಒಂದು ಕಲ್ಯಾಣನಿಧಿ ಸ್ಟಾಂಪನ್ನು ಅಂಟಿಸತಕ್ಕದ್ದು ಮತ್ತು ಹಾಗೆ ಸ್ಟಾಂಪ್ ಅಂಟಿಸದ ಯಾವುದೇ ವಾದಕಾಲೀನ ಅರ್ಜಿಯನ್ನು ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಇತರ ಪ್ರಾಧಿಕಾರದ ಮುಂದೆ ದಾಖಲು ಮಾಡತಕ್ಕದ್ದಲ್ಲ ಅಥವಾ ಅವು ಅದನ್ನು ಸ್ವೀಕರಿಸತಕ್ಕದ್ದಲ್ಲ".

7. **23ಎ ಪ್ರಕರಣದ ತಿದ್ದುಪಡಿ.**– ಮೂಲ ಅಧಿನಿಯಮ 23ಎ ಪ್ರಕರಣದಲ್ಲಿ,–

(1) (1)ನೇ ಉಪ ಪ್ರಕರಣದಲ್ಲಿ, " ಕಲ್ಯಾಣ ನಿಧಿಗೆ ಪ್ರತಿವರ್ಷವೂ" ಎಂಬ ಪದಗಳ ತರುವಾಯ "ಮಾರ್ಚ್ ಮೂವತ್ತೊಂದಕ್ಕೆ ಮೊದಲು" ಎಂಬ ಪದಗಳನ್ನು ಸೇರಿಸತಕ್ಕದ್ದು.

(2) (2)ನೇ ಉಪ–ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(2) ಯಾರೇ ನಾಮಾಂಕಿತ ಹಿರಿಯ ನ್ಯಾಯವಾದಿಯು, ವಂತಿಗೆಯನ್ನು ಸಂದಾಯ ಮಾಡಬೇಕಾಗಿದ್ದ ಪ್ರತಿ ವರ್ಷದ ಮಾರ್ಚ್ ಮೂವತ್ತೊಂದರಂದು ಅಥವಾ ಅದಕ್ಕೆ ಮೊದಲು, (1)ನೇ ಉಪ ಪ್ರಕರಣದ ಅಡಿಯಲ್ಲಿ ವಂತಿಕೆಯನ್ನು ಸಂದಾಯ ಮಾಡಲು ತಪ್ಪಿದಲ್ಲಿ, ಐದುನೂರು ರೂಪಾಯಿಗಳ ಗರಿಷ್ಠ ಮೊಬಲಗಿಗೆ ಒಳಪಟ್ಟು ಪ್ರತಿತಿಂಗಳಿಗೆ ಅಥವಾ ಅದರ ಭಾಗಕ್ಕೆ ಒಂದು ನೂರು ರೂಪಾಯಿಗಳ ವಿಳಂಬ ಶುಲ್ಕದೊಂದಿಗೆ ಆ ದಿನಾಂಕದಿಂದ ಆರು ತಿಂಗಳೊಳಗೆ ಅಂಥ ವಂತಿಕೆಯನ್ನು ಸಂದಾಯ ಮಾಡಬಹುದು".

(3) (2)ನೇ ಉಪ–ಪ್ರಕರಣದ ತರುವಾಯ, ಈ ಮುಂದಿನ ಸೇರಿಸತಕ್ಕದ್ದು, ಎಂದರೆ:–

"(3) (2)ನೇ ಉಪ–ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ವಂತಿಕೆಯನ್ನು ಸಂದಾಯ ಮಾಡದಿರುವ ಸಂದರ್ಭದಲ್ಲಿ, ಅಂಥ ತಪ್ಪುವಿಕೆಯನ್ನು ಈ ಅಧಿನಿಯಮದ ಉದ್ದೇಶಕ್ಕಾಗಿ ವ್ಯತ್ತಿಯನ್ನು ನಿಲ್ಲಿಸಿರುವುದಾಗಿ ಭಾವಿಸತಕ್ಕದ್ದು ಮತ್ತು 15ನೇ ಪ್ರಕರಣದ (5) ಮತ್ತು (6)ನೇ ಉಪ–ಪ್ರಕರಣಗಳ ಉಪಬಂಧಗಳು ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು."

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ (ತಿದ್ದುಪಡಿ) ಅಧಿನಿಯಮ, 2002ನ್ನು (2002ರ ಕರ್ನಾಟಕ ಅಧಿನಿಯಮ 18) ಹೊರಡಿಸಲಾಗಿದೆ. ಸದರಿ ಅಧಿನಿಯಮವನ್ನು ಇಂದಿನವರೆಗೂ ಜಾರಿಗೊಳಿಸಿಲ್ಲ. ಕರ್ನಾಟಕ ರಾಜ್ಯ ವಕೀಲರ ಸಂಘ, ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ (ತಿದ್ದುಪಡಿ) ಅಧಿನಿಯಮ, 2002ಕ್ಕೆ ಕೆಲವು ತಿದ್ದುಪಡಿಗಳನ್ನು ತರಬೇಕೆಂದು ಪ್ರಸ್ತಾವಿಸಿದೆ. ಅದರಂತೆ, ಕರ್ನಾಟಕ ನ್ಯಾಯವಾದಿಗಳ ಕಲ್ಯಾಣನಿಧಿ (ತಿದ್ದುಪಡಿ) ವಿಧೇಯಕ, 2004ರ ಒಂದು ಕರಡನ್ನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯು ತಯಾರಿಸಿದೆ ಮತ್ತು ಪರಿಶೀಲಿಸಿದೆ. ವಿಧೇಯಕವು, ಈ ಮುಂದಿನವುಗಳಿಗಾಗಿ ಉಪಬಂಧ ಕಲ್ಪಿಸುತ್ತದೆ, ಎಂದರೆ:–

(i) ಅಧಿನಿಯಮದ 2ನೇ ಪ್ರಕರಣಕ್ಕೆ (ಎಫ್ ಎಫ್) ಖಂಡವನ್ನು ಸೇರಿಸುವ ಮೂಲಕ ಮಧ್ಯಕಾಲೀನ ಅರ್ಜಿಗಳನ್ನು ಪರಿಭಾಷಿಸುವುದು;

(ii) 15ನೇ ಪ್ರಕರಣದ (1)ನೇ ಉಪ–ಪ್ರಕರಣಕ್ಕೆ ತಿದ್ದುಪಡಿ ತರುವ ಮೂಲಕ ಪಟ್ಟಿಯಲ್ಲಿ ಹೆಸರು ಸೇರಿಸುವುದಕ್ಕಾಗಿ ನಿಗದಿಪಡಿಸಲಾಗಿದ್ದ ಒಂದು ಸಾವಿರ ರೂಪಾಯಿಗಳ ಪ್ರವೇಶ ಶುಲ್ಕವನ್ನು ತಿದ್ದುಪಡಿ ಅಧಿನಿಯಮದ ಪ್ರಾರಂಭದ ತರುವಾಯ ಎರಡು ಸಾವಿರ ರೂಪಾಯಿಗಳಿಗೆ ಹೆಚ್ಚಿಸುವುದು ಮತ್ತು 1997ರ ಏಪ್ರಿಲ್ 2ನೇ ದಿನಾಂಕದ ತರುವಾಯ ಪಟ್ಟಿಯಲ್ಲಿ ಹೆಸರನ್ನು ನೋಂದಾಯಿಸುವ ನ್ಯಾಯವಾದಿಗಳಿಗಾಗಿ ಒಂದು ಸಾವಿರ ರೂಪಾಯಿಗಳಿಗೆ ಹೆಚ್ಚಿಸುವುದು;

(iii) ಅಧಿನಿಯಮದ 15ನೇ ಪ್ರಕರಣಕ್ಕೆ (1ಎ) ಉಪ–ಪ್ರಕರಣವನ್ನು ಸೇರಿಸುವ ಮೂಲಕ, ಪ್ರಸ್ತಾವಿತ ಅಧಿನಿಯಮದ ಪ್ರಾರಂಭದಿಂದ ತಿಂಗಳಿಗೆ ಅಥವಾ ತಿಂಗಳಿನ ಭಾಗಕ್ಕೆ ಐವತ್ತು ರೂಪಾಯಿಗಳ ವಿಳಂಬ ಶುಲ್ಕವನ್ನು ವಿಧಿಸುವುದು;

(iv) ಅಧಿನಿಯಮ 15ನೇ ಪ್ರಕರಣಕ್ಕೆ (4)ನೇ ಉಪ–ಪ್ರಕರಣವನ್ನು ಸೇರಿಸುವ ಮೂಲಕ, ಪ್ರತಿಯೊಬ್ಬ ಸದಸ್ಯನು, ತಾನು ನಿಧಿಯ ಸದಸ್ಯನಾದ ದಿನಾಂಕದಿಂದ ಪ್ರತಿ ಐದು ವರ್ಷಗಳು ಪೂರ್ಣಗೊಂಡ ತರುವಾಯ ಐದು ನೂರು ರೂಪಾಯಿಗಳೊಂದಿಗೆ ಒಂದು ಘೋಷಣೆಯನ್ನು ದಾಖಲಿಸುವಂತೆ ಅಗತ್ಯಪಡಿಸುವುದು;

(v) ಅಧಿನಿಯಮದ 16ನೇ ಪ್ರಕರಣದ (1)ನೇ ಉಪ–ಪ್ರಕರಣಕ್ಕೆ ತಿದ್ದುಪಡಿ ತರುವ ಮೂಲಕ, ವೃತ್ತಿ ಸಮಾಪ್ತಿಯಾದ ಮೇಲಿನ ನಿಧಿ ಸಂದಾಯ ಕುರಿತು, ಮೂರು ಸಾವಿರ ರೂಪಾಯಿಗಳು ಮತ್ತು ಒಂದು ಲಕ್ಷದ ಐವತ್ತು ಸಾವಿರ ರೂಪಯಿಗಳು ಎಂಬುದನ್ನು ಕ್ರಮವಾಗಿ ಎರಡು ಸಾವಿರ ರೂಪಾಯಿಗಳಿಗೆ ಮತ್ತು ಐವತ್ತು ಸಾವಿರ ರೂಪಾಯಿಗಳಿಗೆ ಕಡಿಮೆಮಾಡುವುದು.

ಪ್ರಾಸಂಗಿಕವಾದ ಇತರ ಕೆಲವು ತಿದ್ದುಪಡಿಗಳನ್ನು ಸಹ ಮಾಡಲಾಗಿದೆ. ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿಕ ಕ್ರಮದಿಂದಾಗಿ ಯಾವುದೇ ಹೆಚ್ಚಿನ ವೆಚ್ಚವು ಉಂಟಾಗುವುದಿಲ್ಲ.

ಅನುಬಂಧ

ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ ಅಧಿನಿಯಮ, 1983ರ (1985ರ ಕರ್ನಾಟಕ ಅಧಿನಿಯಮ 2) ಉದ್ಧೃತ ಭಾಗ

xx xx xx

2. ಪರಿಭಾಷೆಗಳು.– xx xx xx

(ಎಮ್) "ವೃತ್ತಿಯ ಅಮಾನತ್ತು" ಎಂದರೆ, ಸ್ವಿಚ್ಛೆಯಿಂದ ನ್ಯಾಯವಾದಿಯಾಗಿ ವೃತ್ತಿಯನ್ನು ನಿಲ್ಲಿಸುವುದು ಅಥವಾ ದುರ್ನಡತೆಗಾಗಿ ಬಾರ್ ಕೌನ್ಸಿಲ್‌ನಿಂದ ಅಮಾನತ್ತು ಗೊಳಿಸುವುದು ಮತ್ತು 16ನೇ ಪ್ರಕರಣದ (4)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ವೃತ್ತಿಯಿಂದ ಪ್ರಭಾವಿತ ಸ್ವಯಂ ಅಮಾನತು ಕೂಡ ಒಳಗೊಳ್ಳುತ್ತದೆ.

xx xx xx

15. ನಿಧಿಯ ಸದಸ್ಯತ್ವ.– (1) ಕರ್ನಾಟಕ ರಾಜ್ಯದಲ್ಲಿ ವೃತ್ತಿ ನಡೆಸುತ್ತಿರುವ ಪ್ರತಿಯೊಬ್ಬ ನ್ಯಾಯವಾದಿಯು, ಕರ್ನಾಟಕ ರಾಜ್ಯ ಬಾರ್ ಕೌನ್ಸಿಲ್‌ನ ಪಟ್ಟಿಯಲ್ಲಿ ಹೆಸರನ್ನು ಸೇರಿಸಿದ ತರುವಾಯ ನಿಧಿಯ ಸದಸ್ಯನಾಗತಕ್ಕದ್ದು ಮತ್ತು ನಿಯಮಿಸಬಹುದಾದ ಅಂಥ ನಮೂನೆಯಲ್ಲಿ ಒಂದು ಸಾವಿರ ರೂಪಾಯಿಗಳ ಪ್ರವೇಶ ಶುಲ್ಕದೊಡನೆ ಘೋಷಣೆಯನ್ನು ಸಲ್ಲಿಸತಕ್ಕದ್ದು:

ಪರಂತು, ಈಗಾಗಲೇ ಸದಸ್ಯರಾಗಿರುವ ನ್ಯಾಯವಾದಿಗಳನ್ನು ಬಿಟ್ಟು ಉಳಿದ ನ್ಯಾಯವಾದಿಗಳು ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ (ತಿದ್ದುಪಡಿ) ಅಧಿನಿಯಮ 1993 ಜಾರಿಗೆ ಬಂದ ದಿನಾಂಕದಿಂದ ಆರು ತಿಂಗಳುಗಳೊಳಗಾಗಿ ಒಂದು ಸಾವಿರ ರೂಪಾಯಿಗಳನ್ನು ಸಂದಾಯ ಮಾಡಿ ನಿಯಮಿಸಬಹುದಾದ ಅಂಥ ಘೋಷಣೆಯನ್ನು ಸಲ್ಲಿಸತಕ್ಕದ್ದು.

ಮತ್ತು ಪರಂತು, ಈಗಾಗಲೇ ಸದಸ್ಯರಾಗಿರುವ ನ್ಯಾಯವಾದಿಗಳು, ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ (ತಿದ್ದುಪಡಿ) ಅಧಿನಿಯಮ, 1996 ಜಾರಿಯಲ್ಲಿ ಬಂದ ದಿನಾಂಕದಿಂದ ಆರು ತಿಂಗಳೊಳಗೆ ಪ್ರವೇಶ ಶುಲ್ಕವೆಂಬುದಾಗಿ ಎಂಟು ನೂರು ರೂಪಾಯಿಗಳ ನೂರು ಬಾಕಿ ಮೊಬಲಗನ್ನು ಸಂದಾಯ ಮಾಡತಕ್ಕದ್ದು.

(1ಎ) (1)ನೇ ಉಪ–ಪ್ರಕರಣದ ಅಡಿಯಲ್ಲಿ ನಿಗದಿಪಡಿಸಿದ ಸಮಯದೊಳಗೆ ಪ್ರವೇಶ ಶುಲ್ಕವನ್ನು ಸಂದಾಯ ಮಾಡಲು ಯಾವೊಬ್ಬ ನ್ಯಾಯವಾದಿಯು ವಿಫಲನಾದರೆ ತಿಂಗಳಿಗೆ ಅಥವಾ ಅದರ ಭಾಗಕ್ಕೆ ಇಪ್ಪತ್ತು ರೂಪಾಯಿಗಳ ವಿಳಂಬ ಶುಲ್ಕದೊಂದಿಗೆ ಅಂಥ ಶುಲ್ಕವನ್ನು ಸಂದಾಯ ಮಾಡತಕ್ಕದ್ದು.

xx xx xx

16. ವೃತ್ತಿಯ ಸಮಾಪ್ತಿಯಾದ ಮೇಲೆ ನಿಧಿಯಿಂದ ಸಂದಾಯ.– (1) ಸದಸ್ಯನು, ವೃದ್ಧಾಪ್ಯದಿಂದಾಗಿ ಸ್ವಯಿಚ್ಛಾ ನಿವೃತ್ತಿ ಪಡೆದುದರಿಂದಾಗಿ ವೃತ್ತಿಯು ಸಮಾಪ್ತಿಯಾದಾಗ ಒಂದು ಲಕ್ಷ ಐವತ್ತು ಸಾವಿರ ರೂಪಾಯಿಗಳ ಗರಿಷ್ಠ ಮಿತಿಯೊಳಪಟ್ಟು ನ್ಯಾಯವಾದಿ ವೃತ್ತಿಯ ಪ್ರತಿಯೊಂದು ಪೂರ್ಣಗೊಂಡ ವರ್ಷಕ್ಕೆ ಮೂರು ಸಾವಿರ ರೂಪಾಯಿಗಳ ಮೊಬಲಗನ್ನು ನಿಧಿಯಿಂದ ಸ್ವೀಕರಿಸಲು ಹಕ್ಕುಳ್ಳವನಾಗಿರತಕ್ಕದ್ದು.

xx xx xx

(4) ಈ ಅಧಿನಿಯಮದ ಮೇರೆಗೆ ಸಂದಾಯ ಮಾಡುವ ಉದ್ದೇಶಕ್ಕಾಗಿ ವೃತ್ತಿಯನ್ನು ಪೂರ್ಣಗೊಳಿಸಿದ ವರ್ಷಗಳ ಅವಧಿಯನ್ನು ಲೆಕ್ಕ ಹಾಕಲು ನಿಧಿಗೆ ಸದಸ್ಯನಾಗಿ ಪ್ರವೇಶ ಪಡೆಯುವುದಕ್ಕಿಂತ ಮೊದಲು, ನ್ಯಾಯವಾದಿ ವೃತ್ತಿಯಲ್ಲಿ ನಿರತನಾಗಿದ್ದರೆ ಅಂಥ ಪ್ರತಿ ನಾಲ್ಕು ವರ್ಷಗಳನ್ನು ವೃತ್ತಿಯ ಒಂದು ವರ್ಷದಂತೆ, ಗಣನೆ ಮಾಡತಕ್ಕದ್ದು ಮತ್ತು ಅಂಥ ಪ್ರವೇಶದ ನಂತರ ವೃತ್ತಿಯಲ್ಲಿ ನಿರತನಾಗಿದ್ದ ವರ್ಷಗಳ ಸಂಖ್ಯೆಗೆ ಅದನ್ನು ಸೇರಿಸತಕ್ಕದ್ದು:

ಪರಂತು, ಈ ಅಧಿನಿಯಮದ ಅಡಿಯಲ್ಲಿ ಮೊಬಲಗನ್ನು ಸಂದಾಯ ಮಾಡುವ ಉದ್ದೇಶಕ್ಕಾಗಿ ಪೂರ್ಣಗೊಂಡ ವರ್ಷಗಳನ್ನು ಲೆಕ್ಕ ಹಾಕುವಾಗ, ನೋಂದಾಯಿಸಿ ಕೊಳ್ಳುವುದಕ್ಕೆ, ಮೊದಲು ಮೂರು ತಿಂಗಳು ಮತ್ತು ಅದಕ್ಕಿಂತ ಹೆಚ್ಚಿನ ಭಾಗವನ್ನು ಹಾಗೂ ನೋಂದಾಯಿತನಾದ ಮೇಲೆ ಆರು ತಿಂಗಳು ಮತ್ತು ಹೆಚ್ಚಿನ ಭಾಗವನ್ನು ಒಂದು ಪೂರ್ಣ ವರ್ಷವೆಂಬುದಾಗಿ ಪರಿಗಣಿಸತಕ್ಕದ್ದು.

ಮತ್ತು ಪರಂತು, ವೃತ್ತಿಯ ಪೂರ್ಣಗೊಂಡ ವರ್ಷಗಳ ಅವಧಿಯನ್ನು ಲೆಕ್ಕ ಹಾಕುವ ಉದ್ದೇಶಕ್ಕಾಗಿ ನ್ಯಾಯವಾದಿಗಳ ಅಧಿನಿಯಮ, 1961ರ (1961 ರ ಕೇಂದ್ರ ಅಧಿನಿಯಮ, 25) 35ನೇ ಪ್ರಕರಣದ ಅಡಿಯಲ್ಲಿ ದುರ್ನಡತೆಯ ಪರಿಣಾಮವಾಗಿ ವೃತ್ತಿ ನಡೆಸದಂತೆ ಅಮಾನತ್ತಿನಲ್ಲಿರಿಸಲಾಗಿದ್ದ ಅವಧಿಯನ್ನು ಹೊರತುಪಡಿಸತಕ್ಕದ್ದು.

ಮತ್ತು ಪರಂತು, ನ್ಯಾಯವಾದಿಯಾಗಿ ಹೆಸರು ಪಟ್ಟಿಯಲ್ಲಿ ಹೆಸರನ್ನು ನಮೂದಿಸಲಾಗಿರುವ ಮತ್ತು 1997ರ ಏಪ್ರಿಲ್ ಒಂದನೇ ದಿನಾಂಕದ ತರುವಾಯ ಸದಸ್ಯನಾಗಿರುವ ಒಬ್ಬ ನ್ಯಾಯವಾದಿಯು, ತಾನು ಸದಸ್ಯನಾದ ಐದನೇ ಮತ್ತು ಹತ್ತನೇ ವರ್ಷದ ಕೊನೆಯ ತಿಂಗಳಿನಲ್ಲಿ ನಿಯಮಿಸಲಾದ ನಮೂನೆಯಲ್ಲಿ ಘೋಷಣೆಗಳನ್ನು ದಾಖಲಿಸತಕ್ಕದ್ದು, ಅದಕ್ಕೆ ತಪ್ಪಿದಲ್ಲಿ ಈ ಪ್ರಕರಣದ ಉದ್ದೇಶಕ್ಕಾಗಿ ಐದನೇ ವರ್ಷದ ಅಥವಾ ಸಂದರ್ಭಾನುಸಾರ ಹತ್ತನೇ ವರ್ಷದ ಕೊನೆಯ ತಿಂಗಳಿನ ಕೊನೆಯ ದಿನಾಂಕದ ನಿಕಟ ತರುವಾಯ ಅವನು ವೃತ್ತಿಯಿಂದ ಸ್ವಯಂ ಅಮಾನತುಗೊಂಡಿರುವುದಾಗಿ ಭಾವಿಸತಕ್ಕದ್ದು.

(5) ಶಾಶ್ವತ ಅಂಗವಿಕಲತೆಯಿಂದಾಗಿ ಸದಸ್ಯನ ವೃತ್ತಿಯು ಸಮಾಪ್ತಿಯಾದ ಸಂದರ್ಭದಲ್ಲಿ ಅವನಿಗೆ ಅಥವಾ ಅಂಥ ಸದಸ್ಯನು ಮೃತನಾದ ಸಂದರ್ಭದಲ್ಲಿ ಆತನ ನಾಮ ನಿರ್ದೇಶಿತನಿಗೆ ಅಥವಾ ಸಂದರ್ಭಾನುಸಾರ ನಾಮ ನಿರ್ದೇಶಿತರು ಯಾರೂ ಇಲ್ಲದಿದ್ದರೆ ಆತನ ಕಾನೂನು ಸಮ್ಮತ ವಾರಸುದಾರರಿಗೆ ಒಂದು ಲಕ್ಷ ಐವತ್ತು ಸಾವಿರ ರೂಪಾಯಿಗಳ ಮೊಬಲಗನ್ನು ಸಂದಾಯ ಮಾಡತಕ್ಕದ್ದು:

ಪರಂತು, ನಿಯೋಜನೆ, ಉಪವೃತ್ತಿ ಅಥವಾ ವ್ಯವಹಾರದ ಉದ್ದೇಶಕ್ಕಾಗಿ ಸ್ವಇಚ್ಛೆಯಿಂದ ಅಮಾನತುಗೊಂಡ ಮತ್ತು ಪುನಃ ವೃತ್ತಿಯಲ್ಲಿ ತೊಡಗಿದ ಅಥವಾ ನಿವೃತ್ತಿಯಿಂದಾಗಿ ಅಥವಾ ಸೇವೆಯಿಂದ ಅಥವಾ ಉದ್ಯೋಗದಿಂದ ತೆಗೆದು ಹಾಕಿದ ಮೇಲೆ ನ್ಯಾಯವಾದಿಯಾಗಿ ಪಟ್ಟಿಗೆ ಸೇರಿಸಲಾದ ಅಥವಾ ನಲವತ್ತು ವರ್ಷಗಳ ವಯಸ್ಸಾದ ತರುವಾಯ ನ್ಯಾಯವಾದಿಯಾಗಿ ಪಟ್ಟಿಗೆ ಸೇರಿದ ಸದಸ್ಯನಿಗೆ ಇಡುಗಂಟು ಮೊತ್ತವನ್ನು ಸಂದಾಯಮಾಡತಕ್ಕದ್ದಲ್ಲ. ಆದರೆ ಅಂಥ ಸದಸ್ಯನಿಗೆ, ವೃತ್ತಿ ಪೂರ್ಣಗೊಂಡ ಪ್ರತಿಯೊಂದು ವರ್ಷಕ್ಕಾಗಿ ಎರಡು ಸಾವಿರ ರೂಪಾಯಿಗಳ ಧರದಲ್ಲಿ ಮೊಬಲಗನ್ನು ಸಂದಾಯ ಮಾಡತಕ್ಕದ್ದು.

XX XX XX

18. ಸದಸ್ಯರುಗಳಿಗೆ ಸಮೂಹ ಜೀವವಿಮೆ ಮತ್ತು ಇತರ ಪ್ರಯೋಜನಗಳು.– ಬಾರ್ ಕೌನ್ಸಿಲ್ ನಿಧಿಯ ಸದಸ್ಯರ ಕಲ್ಯಾಣಕ್ಕಾಗಿ,–

XX XX XX

(ಬಿ) ನಿಧಿಯ ಸದಸ್ಯರಾಗಿ ಮತ್ತು ಅವರ ಅವಲಂಬಿತರಿಗಾಗಿ ವೈದ್ಯಕೀಯ ಮತ್ತು ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸಬಹುದು; ಮತ್ತು

XX XX XX

23. ವಕಾಲತ್ತಿನ ಮೇಲೆ ಸ್ಟಾಂಪ್‌ಗಳನ್ನು ಅಂಟಿಸುವುದು.– (1) XX XX XX

(1ಎ) ಪ್ರತಿಯೊಬ್ಬ ನ್ಯಾಯವಾದಿಯು, ಎಲ್ಲಾ ವ್ಯವಹರಣೆಗಳಲ್ಲಿ ದಾಖಲು ಮಾಡಿದ ಪ್ರತಿಯೊಂದು ಮಧ್ಯಕಾಲೀನ ಅರ್ಜಿಯ ಮೇಲೆ ಐದು ರೂಪಾಯಿಗಳ ಮೌಲ್ಯದ ಒಂದು ಕಲ್ಯಾಣ ನಿಧಿ ಸ್ಟಾಂಪನ್ನು ಅಂಟಿಸತಕ್ಕದ್ದು.

XX XX XX

23ಎ. ಹಿರಿಯ ನ್ಯಾಯವಾದಿಯಿಂದ ವಂತಿಗೆ.– (1) ಪ್ರತಿಯೊಬ್ಬ ನಾಮಾಂಕಿತ ಹಿರಿಯ ನ್ಯಾಯವಾದಿಯು ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿಗೆ ಪ್ರತಿವರ್ಷವೂ ಎರಡು ಸಾವಿರದ ಐದು ನೂರು ರೂಪಾಯಿಗಳ ವಂತಿಗೆಯನ್ನು ಸಂದಾಯ ಮಾಡತಕ್ಕದ್ದು.

(2) ಯಾರೇ ನಾಮಾಂಕಿತ ಹಿರಿಯ ನ್ಯಾಯವಾದಿಯು, ವಂತಿಗೆಯನ್ನು ಸಂದಾಯ ಮಾಡಬೇಕಾಗಿದ್ದ ತಿಂಗಳಿನ ಮುಂದಿನ ತಿಂಗಳ ಕೊನೆಯ ದಿನಕ್ಕಿಂತ ಮೊದಲು (1)ನೆ ಉಪ ಪ್ರಕರಣದ ಅಡಿಯಲ್ಲಿ ವಂತಿಕೆಯನ್ನು ಸಂದಾಯ ಮಾಡಲು ತಪ್ಪಿದಲ್ಲಿ, ಪ್ರತಿ ತಿಂಗಳಿಗೆ ಅಥವಾ ತಿಂಗಳ ಭಾಗಕ್ಕೆ ಎರಡುನೂರಾ ಐವತ್ತು ರೂಪಾಯಿಗಳ ವಿಳಂಬ ಶುಲ್ಕದೊಂದಿಗೆ ಅಂಥ ವಂತಿಕೆಯನ್ನು ಸಂದಾಯ ಮಾಡಬಹುದು.

ಅನುಬಂಧ–3

ಭೂಸ್ವಾಧೀನ (ಕರ್ನಾಟಕ ತಿದ್ದುಪಡಿ) ವಿಧೇಯಕ, 2004

[2004ರ ವಿಧಾನ ಸಭೆಯ ವಿಧೇಯಕ ಸಂಖ್ಯೆ 25]

ಭೂಸ್ವಾಧೀನ ಅಧಿನಿಯಮ, 1894ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಭೂಸ್ವಾಧೀನ ಅಧಿನಿಯಮ, 1894 ನ್ನು (1894ರ ಕೇಂದ್ರ ಅಧಿನಿಯಮ 1) ಕರ್ನಾಟಕ ರಾಜ್ಯಕ್ಕೆ ಅನ್ವಯವಾಗುವಂತೆ ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಐವತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು ಭೂಸ್ವಾಧೀನ (ಕರ್ನಾಟಕ ತಿದ್ದುಪಡಿ) ಅಧಿನಿಯಮ, 2004 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

2. 28ನೇ ಅಧಿನೀಯಮದ ತಿದ್ದುಪಡಿ.– ಭೂಸ್ವಾಧೀನ ಅಧಿನಿಯಮ, 1894 ರ (1894ರ ಕೇಂದ್ರ ಅಧಿನಿಯಮ 1) (ಇದರಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ), 28ನೇ ಪ್ರಕರಣದಲ್ಲಿ.–

(ಎ) "ಶೇಕಡಾ ಒಂಭತ್ತರ" ಎಂಬ ಪದಗಳಿಗೆ "ಶೇಕಡಾ ಆರರ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) ಪರಂತುಕದಲ್ಲಿ "ಶೇಕಡಾ ಹದಿನೈದರ" ಎಂಬ ಪದಗಳಿಗೆ "ಶೇಕಡಾ ಒಂಭತ್ತರ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

3. 34ನೇ ಪ್ರಕರಣದ ತಿದ್ದುಪಡಿ.– ಮೂಲ ಅಧಿನಿಯಮದ 34ನೇ ಪ್ರಕರಣದಲ್ಲಿ.–

(ಎ) "ಶೇಕಡಾ ಒಂಭತ್ತರ" ಎಂಬ ಪದಗಳಿಗೆ "ಶೇಕಡಾ ಆರರ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಬಿ) ಪರಂತುಕದಲ್ಲಿ, "ಶೇಕಡಾ ಹದಿನೈದರ" ಎಂಬ ಪದಗಳಿಗೆ "ಶೇಕಡಾ ಒಂಭತ್ತರ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಉದ್ದೇಶ ಮತ್ತು ಕಾರಣಗಳ ಹೇಳಿಕೆ

ಭೂಸ್ವಾಧೀನ ಅಧಿನಿಯಮ, 1894ರ (1894ರ ಕೇಂದ್ರ ಅಧಿನಿಯಮ 1) 28ನೇ ಪ್ರಕರಣವು, ನ್ಯಾಯಾಲಯದ ಐತೀರ್ಪಿನಂತೆ ಹೆಚ್ಚುವರಿ ಪರಿಹಾರ ಹಣದ ಮೇಲೆ ವಾರ್ಷಿಕ ಶೇಕಡಾ ಒಂಭತ್ತರ ದರದಲ್ಲಿ ಬಡ್ಡಿ ನೀಡುವುದನ್ನು ಮತ್ತು ಭೂಸ್ವಾಧೀನ ತೆಗೆದುಕೊಂಡ ದಿನಾಂಕದಿಂದ ಒಂದು ವರ್ಷದ ಅವಧಿಯ ನಂತರ ಪರಿಹಾರ ಹಣದ ಸಂದಾಯಕ್ಕೆ ಶೇಕಡಾ ಹದಿನೈದರ ದರದಲ್ಲಿ ವಾರ್ಷಿಕ ಬಡ್ಡಿ ನೀಡುವುದನ್ನು ಉಪಬಂಧಿಸುತ್ತದೆ.

ಸದರಿ ಅಧಿನಿಯಮದ 34ನೇ ಪ್ರಕರಣವು ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡಂದು ಅಥವಾ ಅದಕ್ಕೆ ಮೊದಲು ಅಂಥ ಪರಿಹಾರದ ಮೊಬಲಗನ್ನು ಸಂದಾಯ ಮಾಡದಿದ್ದಲ್ಲಿ ಅಥವಾ ಠೇವಣಿ ಇಡದಿದ್ದಲ್ಲಿ, ಭೂಮಿಯನ್ನು ಹಾಗೆ ಸ್ವಾಧೀನಕ್ಕೆ ತೆಗೆದುಕೊಂಡ ಸಮಯದಿಂದ ವಾರ್ಷಿಕ ಶೇಕಡಾ ಒಂಭತ್ತರ ದರದಲ್ಲಿ, ಹಾಗೆ ಸಂದಾಯ ಮಾಡುವವರೆಗೆ ಅಥವಾ ಠೇವಣಿ ಇಡುವವರೆಗೆ ಬಡ್ಡಿ ಸಂದಾಯ ಮಾಡುವುದನ್ನು ಮತ್ತು ಒಂದು ವರ್ಷದ ಅವಧಿಯು ಮುಕ್ತಾಯಗೊಂಡ ತರುವಾಯ ಹಾಗೆ ಮುಕ್ತಾಯಗೊಂಡ ದಿನಾಂಕಕ್ಕೆ ಮೊದಲು ಅದನ್ನು ಸಂದಾಯ ಮಾಡದಿದ್ದಲ್ಲಿ ಅಥವಾ ಠೇವಣಿ ಇಡದಿದ್ದಲ್ಲಿ ಪರಿಹಾರದ ಮೊಬಲಗಿನ ಅಥವಾ ಅದರ ಭಾಗದ ಮೇಲೆ, ವಾರ್ಷಿಕ ಶೇಕಡಾ ಹದಿನೈದರ ದರದಲ್ಲಿ ಬಡ್ಡಿ ಸಂದಾಯ ಮಾಡಬೇಕೆಂದು ಉಪಬಂಧಿಸುತ್ತದೆ.

ಇತ್ತೀಚೆಗೆ ಬ್ಯಾಂಕುಗಳು ಸಂದಾಯ ಮಾಡುವ ಬಡ್ಡಿಯ ದರಗಳನ್ನು ಕಡಿಮೆ ಮಾಡುತ್ತಿರುವುದರಿಂದ, ಮೇಲ್ಕಂಡ ಪರಿಸ್ಥಿತಿಯಲ್ಲಿ ಸಂದಾಯ ಮಾಡತಕ್ಕ ಬಡ್ಡಿಯ ದರಗಳನ್ನು ಅನುಕ್ರಮವಾಗಿ ಶೇಕಡಾ ಒಂಭತ್ತರಿಂದ ಶೇಕಡಾ ಆರಕ್ಕೆ ಮತ್ತು ಶೇಕಡಾ ಹದಿನೈದರಿಂದ ಶೇಕಡಾ ಒಂಭತ್ತಕ್ಕೆ ಇಳಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

ಅನುಬಂಧ

ಭೂಸ್ವಾಧೀನ ಅಧಿನಿಯಮ, 1894ರ (1894ರ ಕೇಂದ್ರ ಅಧಿನಿಯಮ 1) ಉದ್ಧೃತ ಭಾಗ

XX XX XX

28. ಹೆಚ್ಚಿನ ನಷ್ಟ ಪರಿಹಾರದ ಮೇಲೆ ಬಡ್ಡಿಯನ್ನು ಸಂದಾಯ ಮಾಡಲು ಡೆಪ್ಯೂಟಿ ಕಮೀಷನರು ನಿರ್ದೇಶಿಸಬಹುದು.– ಡೆಪ್ಯೂಟಿ ಕಮೀಷನರು ನಷ್ಟಪರಿಹಾರವೆಂದು ಕೊಡಬೇಕಾಗಿದ್ದ ಮೊಬಲಗು, ಡೆಪ್ಯೂಟಿ ಕಮೀಷನರು ನಷ್ಟಪರಿಹಾರವೆಂದು ಕೊಟ್ಟ ಮೊಬಲಗಿಂತ ಹೆಚ್ಚಿರಬೇಕೆಂದು ನ್ಯಾಯಾಲಯವು ಅಭಿಪ್ರಾಯಪಟ್ಟಲ್ಲಿ, ಅವನು ಭೂಮಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡ ದಿನಾಂಕದಿಂದ ಹಾಗೆ ಹೆಚ್ಚಿಗೆಯಾದ ಮೊಬಲಗನ್ನು ನ್ಯಾಯಾಲಕ್ಕೆ ಸಂದಾಯ ಮಾಡುವ ದಿನಾಂಕದವರೆಗೆ ಅಂಥ ಹೆಚ್ಚಿನ ಮೊಬಲಗಿನ ಶೇಕಡಾ ಒಂಭತ್ತರ ದರದಲ್ಲಿ ಬಡ್ಡಿಯನ್ನು ಡೆಪ್ಯೂಟಿ ಕಮೀಷನರು ನ್ಯಾಯಾಲಯದಲ್ಲಿ ಸಂದಾಯ ಮಾಡಬೇಕೆಂದು ನ್ಯಾಯಾಲಯದ ಐ–ತೀರ್ಪಿನಲ್ಲಿ ನಿರ್ದೇಶಿಸಬಹುದು:

ಪರಂತು, ನ್ಯಾಯಾಲಯದ ಐ–ತೀರ್ಪು, ಅಂಥ ಹೆಚ್ಚುವರಿ ಮೊಬಲಗು ಅಥವಾ ಅದರ ಯಾವುದೇ ಭಾಗವನ್ನು ಸ್ವಾಧೀನಕ್ಕೆ ತೆಗೆದುಕೊಂಡು ದಿನಾಂಕದಿಂದ ಒಂದು ವರ್ಷದ ಅವಧಿಯು ಮುಕ್ತಾಯಗೊಂಡ ತರುವಾಯ ನ್ಯಾಯಾಲಕ್ಕೆ ಸಂದಾಯ ಮಾಡುವಲ್ಲಿ ವಾರ್ಷಿಕ ಶೇಕಡ ಹದಿನೈದರ ದರದಂತೆ ಬಡ್ಡಿಯನ್ನು, ಅಂಥ ಮುಕ್ತಾಯಗೊಂಡ ದಿನಾಂಕಕ್ಕೆ ಮೊದಲು ನ್ಯಾಯಾಲಯಕ್ಕೆ ಸಂದಾಯ ಮಾಡದಿದ್ದಲ್ಲಿ ಅಂಥ ಹೆಚ್ಚುವರಿ ಮೊಬಲಗಿನ ಅಥವಾ ಅದರ ಭಾಗದ ಮೇಲೆ, ಸದರಿ ಒಂದು ವರ್ಷದ ಅವಧಿಯು ಮುಕ್ತಾಯಗೊಂಡ ದಿನಾಂಕದಿಂದ ಸಂದಾಯ ಮಾಡತಕ್ಕದ್ದೆಂದು ಸಹ ನ್ಯಾಯಾಲಯವು ನಿರ್ದೇಶಿಸಬಹುದು.

XX XX XX

34. ಬಡ್ಡಿ ಸಂದಾಯ.– ಭೂ ಸ್ವಾಧೀನವನ್ನು ತೆಗೆದುಕೊಳ್ಳುವುದು ಅಥವಾ ಅದಕ್ಕೆ ಮೊದಲು ಅಂಥ ನಷ್ಟಪರಿಹಾರದ ಮೊಬಲಗನ್ನು ಸಂದಾಯ ಮಾಡದಿದ್ದರೆ ಅಥವಾ ಠೇವಣಿ ಇಡದಿದ್ದರೆ, ಡೆಪ್ಯೂಟಿ ಕಮೀಷನರು ಹಾಗೆ ಸ್ವಾಧೀನಕ್ಕೆ ತೆಗೆದುಕೊಂಡ ಸಮಯದಿಂದ ಅದನ್ನು ಹಾಗೆ ಸಂದಾಯ ಮಾಡುವವರೆಗೆ ಅಥವಾ ಠೇವಣಿ ಇಡುವವರೆಗೆ, ಐ–ತೀರ್ಪಿನ ಮೇರೆಗೆ ಕೊಡಬೇಕಾಗಿರುವ ಮೊಬಲಗನ್ನು ವಾರ್ಷಿಕ ಶೇಕಡಾ ಒಂಭತ್ತರ ದರದ ಬಡ್ಡಿಯಂತೆ ಸಂದಾಯ ಮಾಡತಕ್ಕದ್ದು:

ಪರಂತು, ಭೂಸ್ವಾಧೀನ ತೆಗೆದುಕೊಂಡ ದಿನಾಂಕದಿಂದ ಒಂದು ವರ್ಷದ ಅವಧಿಯೊಳಗೆ ಅಂಥ ಪರಿಹಾರದ ಮೊಬಲಗನ್ನು ಅಥವಾ ಅದರ ಭಾಗವನ್ನು ಸಂದಾಯ ಮಾಡದಿದ್ದಲ್ಲಿ ಅಥವಾ ಠೇವಣಿ ಇಡದಿದ್ದಲ್ಲಿ, ಅಂಥ ಮುಕ್ತಾಯಗೊಂಡ ದಿನಾಂಕಕ್ಕೆ ಮೊದಲು ಪರಿಹಾರದ ಮೊಬಲಗನ್ನು ಅಥವಾ ಅದರ ಭಾಗವನ್ನು ಸಂದಾಯ ಮಾಡದಿದ್ದಲ್ಲಿ ಅಥವಾ ಠೇವಣಿ ಇಡದಿದ್ದಲ್ಲಿ, ಸದರಿ ಒಂದು ವರ್ಷದ ಅವಧಿಯು ಮುಕ್ತಾಯಗೊಂಡ ದಿನಾಂಕದಿಂದ ವಾರ್ಷಿಕ ಶೇಕಡಾ ಹದಿನೈದರ ದರದಂತೆ ಬಡ್ಡಿಯನ್ನು ಸಂದಾಯ ಮಾಡತಕ್ಕದ್ದು.

XX XX XX

ಅನುಬಂಧ–4

ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2005

(2005ರ ವಿಧಾನಸಭೆಯ ವಿಧೇಯಕ ಸಂಖ್ಯೆ1)

ಬೆಂಗಳೂರು ಮಹಾನಗರ ಪ್ರದೇಶಗಳಿಗಾಗಿ ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1985ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಬೆಂಗಳೂರು ಮಹಾನಗರ ಪದ್ರೇಶ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1985ನ್ನು (1985ರ ಕರ್ನಾಟಕ ಅಧಿನಿಯಮ 39) ಮತ್ತಷ್ಟು ತಿದ್ದುಪಡಿಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:–

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.– (1) ಈ ಅಧಿನಿಯಮವನ್ನು ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2005 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೆ ಜಾರಿಗೆ ಬರತಕ್ಕದ್ದು.

2. 2ನೇ ಪ್ರಕರಣದ ತಿದ್ದುಪಡಿ.– ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1985ರ 2ನೇ ಪ್ರಕರಣದ (ಸಿ) ಖಂಡದಲ್ಲಿ "ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕು" ಎಂಬ ಪದಗಳಿಗೆ "ಬೆಂಗಳೂರು ಗ್ರಾಮಾಂತರ ಜಿಲ್ಲೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಉದ್ದೇಶ ಮತ್ತು ಕಾರಣಗಳ ಹೇಳಿಕೆ

ಬೆಂಗಳೂರು ಮಹಾನಗರ ಪಾಲಿಕೆ ಪ್ರದೇಶದಿಂದ ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕನ್ನು ಬಿಟ್ಟುಬಿಡುವ ಮೂಲಕ ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿಯ ಅಧಿಕಾರ ವ್ಯಾಪ್ತಿಯನ್ನು ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಿಗೆ ಸೀಮಿತಗೊಳಿಸುವ ಸಲುವಾಗಿ ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1985ನ್ನು ತಿದ್ದುಪಡಿಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

ಅನುಬಂಧ

ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ, 1985ರ

ಉದ್ಧೃತ ಭಾಗ

xx xx xx

2. ಪರಿಭಾಷೆಗಳು.–xx xx xx

(ಸಿ) "ಬೆಂಗಳೂರು ಮಹಾನಗರ ಪ್ರದೇಶ" ಎಂದರೆ, ಬೆಂಗಳೂರು ಜಿಲ್ಲೆ ಮತ್ತು ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕು ಮತ್ತು ರಾಜ್ಯ ಸರ್ಕಾರವು ಆಗಿಂದಾಗ್ಗೆ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದುದಾದ ಅಂಥ ಇತರ ಸ್ಥಳಗಳನ್ನು ಒಳಗೊಂಡ ಪ್ರದೇಶ;

xx xx xx

———— * ———— * ———— * ————

ಮುದ್ರಕರು: ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳು, ಸಜೆಮುತು. ಕಾಸೂ. 138, 350 ಪುಸ್ತಕಗಳು, ದಿ: 21-12-2005